ಮುದುಕರ ಹೊಗಳಿಕೆಯ ಮಾತು ಕೇಳುತ್ತಿದ್ದಂತೆ ನನಗೆ ಸಂಕೋಚವಾಗತೊಡಗಿತು. ಅವರು ನನ್ನ ಎದುರಿಗೇ ಕುಳಿತುಕೊಂಡು ತಮ್ಮ ಹಾವಭಾವಗಳಿಂದ ಆ ಹೊಗಳಿಕೆಯ ಮಾತುಗಳನ್ನು ಇನ್ನಷ್ಟು ಉತ್ಪ್ರೇಕ್ಷಿಸುತ್ತಿದ್ದರು. ಅವರ ಮಾತನ್ನು ನಡುವೆಯೇ ತಡೆದು ಹೇಳಿದೆ: 'ದೇಶಪಾಂಡೇನ ಮಾತು ತಗೊಂಡು ಏನ ಮಾಡತೀರಿ ಬಿಡ್ರಿ. ಅವಗ ನನ್ನ ಮ್ಯಾಲ ಸ್ವಲ್ಪ ಅಭಿಮಾನ ಜಾಸ್ತಿ. ಏನೇನೋ ಹೇಳಿರಬೇಕು. ಅವನ ಮಾತು ನಂಬಬ್ಯಾಡ್ರಿ.'

'ಹಾಂ ನೋಡಿದಿರೋ ಇಲ್ಲೊ! ದೇಶಪಾಂಡೆ ಇದನ್ನ ಹೇಳತಿದ್ದ. ಇಷ್ಟೆಲ್ಲಾ ಹೆಸರು ಮಾಡಿದ್ದರೂ ಒಂದಿಷ್ಟೂ ಸೊಕ್ಕು ಇಲ್ಲ ಅಂತಿದ್ದ. ಈಗಿನ ಕಾಲದ ಹುಡುಗರು ಅಂದರ ಏನಂತೀರಿ ನೀವು? ಒಂದಿಷ್ಟು ಪೇಪರಿನ್ಯಾಗ ಹೆಸರು ಬಂದ್ರ ಸಾಕು, ದೊಡ್ಡ ಸಾಹಿತಿ ಆದೆ ಅಂತ ಕಣ್ಣs ನೆತ್ತಿ ಮ್ಯಾಗ ಹೋಗತಾವು. ತುಂಬಿದ ಕೊಡಾ ಅಂದರ ಹೀಂಗಿರಬೇಕು.'

**'ನೋಡ್ರಿ, ಸಾಹೇಬರ... ಈ ಸರಕಾರೀ ಆಫೀಸು ಅಂದರ ಬಾಳ ಕೆಟ್ಟ. ನೋಡ್ರಿ... ರಿಟಾಯರ್ ಆಗಿ ಒಂಬತ್ತು ವರ್ಷ ಆತು. ಇನ್ನೂ ಪೆನ್ಷನ್ ಬರವಲ್ದು. ಊರೊಳಗ ಕೂತು ಕಾಗದದ ಮ್ಯಾಲ ಕಾಗದಾ ಬರದೆ. ಏನಾಗೈತಿ ಅಂತ ಕೂಡ ತಿಳಿಸಲಿಲ್ಲ. ಸಾಕಾಗಿ ಸ್ವತಾ ಬಂದು ನೋಡಿಕೊಂಡರ ಹೋಗೂನು ಅಂತ ಬಂದೆ...'**

ಅವರು ಏನಾದರೂ ನೆಪ ಹುಡುಕಿ ನನ್ನನ್ನು ಹೊಗಳಬೇಕೆಂದು ಮೊದಲೇ ನಿರ್ಧರಿಸಿದ್ದಂತೆ ಕಾಣುತ್ತಿತ್ತು. ಎಲ್ಲಾ ತಳಬುಡವಿಲ್ಲದ ಹಾರಿಕೆಯ ಹೊಗಳಿಕೆ. ಮೇಲೆ ಉತ್ಪ್ರೇಕ್ಷೆಯ ಹಾವಭಾವಗಳು ಬೇರೆ. ಇವೆಲ್ಲ ಒಂದು ರೀತಿಯ ದೇಶಾವರಿ ತಂತ್ರದ ಲಕ್ಷಣಗಳಲ್ಲವೆ – ಎಂದು ಸಂಶಯ ಬಂತು. ಈ ಹೊಗಳಿಕೆ ಎಲ್ಲಿಗೆ ಒಯ್ಯುತ್ತದೆಯೋ ಎನಿಸಿ ಮಾತಿನ ಜಾಡು ಬದಲಿಸಲು ಯತ್ನಿಸಿದೆ. ಆದರದು ಯಾವ ಊರು ಎಂದು ಕೇಳಿದೆ. ನಿರೀಕ್ಷಿಸಿದಂತೆ ಅವರ ಲಕ್ಷ್ಯ ಸ್ವಲ್ಪ ಬೇರೆ ಕಡೆ ತಿರುಗಿತು. ತಮ್ಮದು ಹಾವೇರಿ ಎಂದರು.

'ಹೌದs? ನಾನು ಹದಿನೈದು ವರ್ಷದ ಹಿಂದೆ ನೌಕರೀ ಆರಂಭ ಮಾಡಿದ್ದs ಹಾವೇರಿಯೊಳಗ. ಅಲ್ಲೀ ಕಾಲೇಜು ಆರಂಭಾಗಿ ಇನ್ನೂ ಬಾಳ ದಿನ ಆಗಿರಲಿಲ್ಲ. ಒಂದು ವರ್ಷ ಮಾತ್ರ ಅಲ್ಲಿದ್ದೆ. ಈಗೂ ನನಗ ಅಲ್ಲಿ ಸಾಕಷ್ಟು ಜನ ಸ್ನೇಹಿತರದಾರ. ಯಾವಾಗಾಲಾದರೂ ಒಂದು ಸಲ ಬರಬೇಕಾಗೇದ ಅಲ್ಲಿಗೇ' ಎಂದೆ.

'ಆವಾಗ ನಾ ಇನ್ನೂ ಹಾವೇರಿಗೆ ಬಂದಿರಲಿಲ್ಲ ಬಿಡ್ರಿ. ಸಾಲೀ ಮಾಸ್ತರಿಕೀ ಮಾಡಿಕೊಂಡು ಎಲ್ಲೋ ಹಾನಗಲ್ಲ ತಾಲೂಕಿನ ಒಂದು ಹಳ್ಳ್ಯಾಗ ಇದ್ದೆ. ರಿಟಾಯರ್ ಆದ ಮ್ಯಾಲ ಹಾವೇರಿಗೆ ಬಂದೆ. ಅಲ್ಲಿಂದ ಒಂದು ಪುಸ್ತಕದ ಅಂಗಡೀ ಸುರು ಮಾಡಿದೆ. ಊರೂರು ತಿರುಗಿ ಸಾಲಿ, ಕಾಲೇಜುಗಳ ಲೈಬ್ರರಿಗೆ ಪುಸ್ತಕಾ ಮಾರತಿದ್ದೆ. ಅಲ್ಲಿ ನಿಮ್ಮ ಪುಸ್ತಕ ಸಾಕಷ್ಟು ಮಾರೀನಿ. ನಿಮ್ಮ ಕಾದಂಬರಿಗಳಿಗೆ ಬಾಳ ಬೇಡಿಕೆ ಇತ್ತು. ಆವಾಗಿಂದನೂ ನಿಮ್ಮ ಹೆಸರು ಗೊತ್ತಿತ್ತು ನನಗೆ. ನಿಮ್ಮನ್ನ ನೋಡಿರಲಿಲ್ಲ ಅಷ್ಟs. ನಿಮ್ಮ ದರ್ಶನ ಆದದ್ದು ಬಾಳ ಸಂತೋಷ. ಮತ್ತ ಹಾವೇರಿಗೆ